3. ಕಾಯಿದೆ ಜಾರಿ ವಿಭಾಗದ ಕೆಲಸ ಕಾರ್ಯಗಳನ್ನು ಪುನಃ ಆರಂಭಿಸಿ ಅನಧಿಕೃತ ರೇಷ್ಮೆ ವಹಿವಾಟನ್ನು ನಿಯಂತ್ರಿಸಲಾಗುತ್ತಿದೆ.
4. ಹೊಸ ತಾಂತ್ರಿಕತೆಗಳನ್ನು ಅಳವಡಿಸಿ ಇಳುವರಿ, ಉತ್ಪಾದಕತೆ ಮತ್ತು ಗಣಮಟ್ಟ ಹೆಚ್ಚಿಸಲು ರೇಷ್ಮೆ ಬೆಳೆಗಾರರು ಮತ್ತು ನೂಲು ಬಿಚ್ಚಾಣಿಕೆದಾರರನ್ನು ಪ್ರೇರೇಪಿಸಲಾಗುತ್ತಿದೆ.
5. ಸರ್ಕಾರದ ದಿನಾಂಕ 13.9.2002ರ ಆದೇಶದಲ್ಲಿ ದಿನಾಂಕ 16.9.2002 ರಿಂದ ಮೂರು ತಿಂಗಳ ಅವಧಿಗೆ ಅಥವಾ ಸರಾಸರಿ ದರ ರೂ. 110-00 ಕ್ಕೆ ಸ್ಥಿರೀಕರಣಗೊಳ್ಳುವವರೆಗೆ ಈ ಎರಡರಲ್ಲಿ ಯಾವುದು ಮೊದಲೋ ಅಲ್ಲಿಯ ತನಕ ಒಂದು ಕೆ.ಜಿ ಗೂಡಿಗೆ ರೂ. 10-00 ಪ್ರೋತ್ಸಾಹ ಧನವನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು 50:50 ಅನುಪಾತದಲ್ಲಿ ನೀಡಲಾಗುತ್ತಿದೆ.
6. ದಿನಾಂಕ 13.9.2002 ಮತ್ತು 17.10.2002ರ ಆದೇಶದಲ್ಲಿ ರಾಜ್ಯದಿಂದ ರೂ. 3.84 ಕೋಟಿ ಹಣವನ್ನು ಪ್ರೋತ್ಸಾಹಧನ ಬಾಬ್ತಿಗೆ ಬಿಡುಗಡೆ ಮಾಡಲಾಗಿದೆ. 31.10.2002 ರವರೆಗೆ ಕೇಂದ್ರದ ಪಾಲು ಸೇರಿ ರೂ. 547.21 ಲಕ್ಷ ಹಣ ಪಾವತಿಸಲಾಗಿದೆ.

ಕಬ್ಬಿನ ಹಣಪಾವತಿಯಲ್ಲಿ ತೀವ್ರ ವಿಳಂಬ

1783(2326): ಶ್ರೀ ಆತ್ಮಾನಂದ ಎಂ.ಎಸ್ (ಮಂಡ್ಯ) : ಮಾನ್ಯ ಪಶುಸಂಗೋಪನೆ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ರಾಜ್ಯದಲ್ಲಿನ ಸಕ್ಕರೆ ಕಾರ್ಖಾನೆಗಳು ಪ್ರಸಕ್ತ ಸಾಲಿನಲ್ಲಿ ಈವರೆವಿಗೆ ಅರೆದಿರುವ ಕಬ್ಬಿನ ಪ್ರಮಾಣವೆಷ್ಟು ಹಾಗೂ ಇದರಿಂದ ಉತ್ಪಾದನೆಯಾಗಿರುವ ಸಕ್ಕರೆಯ ಪ್ರಮಾಣವೆಷ್ಟು?

ಆ. ಸಕ್ಕರೆ ಕಾರ್ಖಾನೆಗಳಿಗೆ ಸರಬರಾಜು ಮಾಡಿರುವ ಕಬ್ಬಿಗಾಗಿ ರೈತರಿಗೆ ಪಾವತಿ ಮಾಡಬೇಕಾದ ಹಣವನ್ನು ನಿರೀಕ್ಷೆಗಿಂತಲೂ ವಿಳಂಬವಾಗಿ ಹಣವನ್ನು ಪಾವತಿ ಮಾಡುತ್ತಿರುವುದರಿಂದ ರೈತರು ಆರ್ಥಿಕ ಸಂಕಷ್ಟಕ್ಕೆ ಗುರಿಯಾಗುತ್ತಾ ಇರುವುದನ್ನು ಸರ್ಕಾರವು ಗಮನಿಸಿದೆಯೇ?

ಇ. ಗಮನಿಸಿದ್ದಲ್ಲಿ ಈ ಪರಿಸ್ಥಿತಿಯ ಸುಧಾರಣೆಗಾಗಿ ಸರ್ಕಾರವು ಯಾವ ಕ್ರಮ ಕೈಗೊಂಡಿದೆ?

ಶ್ರೀ ಎಂ. ಮಹದೇವ (ಪಶುಸಂಗೋಪನೆ ಹಾಗೂ ಸಕ್ಕರೆ ಸಚಿವರು)

ಅ. ರಾಜ್ಯದಲ್ಲಿನ ಸಕ್ಕರೆ ಕಾರ್ಖಾನೆಗಳು 2002-03ನೇ ಸಾಲಿನಲ್ಲಿ ನವೆಂಬರ್ ಅಂತ್ಯಕ್ಕೆ ಸುಮಾರು 4.02 ಲಕ್ಷ ಟನ್ ಕಬ್ಬು ಅರೆದು, ಸುಮಾರು 48,000 ಟನ್ ಸಕ್ಕರೆ ಉತ್ಪಾದನೆ ಮಾಡಿರುತ್ತದೆ.

ಆ. ರೈತರಿಂದ ಖರೀದಿಸಿದ ಕಬ್ಬಿಗೆ ಹಣ ನೀಡುವಲ್ಲಿ ಕೆಲವು ಸಕ್ಕರೆ ಕಾರ್ಖಾನೆಗಳು ವಿಳಂಬ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಕಳೆದ ಸಾಲಿನಲ್ಲಿ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಪೂರೈಸಿದ ರೈತರಿಗೆ ನಿಗದಿತ ಸಮಯದಲ್ಲಿ ಹಣ ಪಾವತಿ ಮಾಡುವಂತೆ ಸೂಚಿಸಲಾಗಿದೆ.

ಇ. ರೈತರ ಕಬ್ಬಿನ ಬಿಲ್ಲನ್ನು ಪಾವತಿಸಲು ಅನುಕೂಲವಾಗುವಂತೆ ಕೇಂದ್ರ ಸರ್ಕಾರದಿಂದ ಹೆಚ್ಚಿನ ಪ್ರಮಾಣದ ಸಕ್ಕರೆ ಬಿಡುಗಡೆ ಮಾಡಿಸಲಾಗುತ್ತಿದೆ. ಕೆಲವು ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ಸರ್ಕಾರದಿಂದ ಮೈದುಸಾಲ ಸಹ ಮಂಜೂರ್ಮಾಡಿ ಬಿಡುಗಡೆ ಮಾಡಲಾಗಿದೆ.

ಅದರಂತೆ ಬಾಕಿ ಉಳಿಸಿಕೊಂಡಿರುವ ರೈತರ ಕಬ್ಬಿನ ಬಿಲ್ಲನ್ನು ಪಾವತಿಸಲು ಏರ್ಪಾಡು ಮಾಡಲು ನಿರ್ದೇಶನಗಳನ್ನು ಸಹ ನೀಡಲಾಗಿದೆ.